ದಿನಾಂಕಃ21/03/2025 ಓ ಎಸ್.05/2020 ಪಿ ಡಬ್ಲ್ಯೂ-01

**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ನಂ.1(ಎ) ರಿಂದ 1(ಸಿ) ಪರ ಶ್ರೀ ಎನ್ ಆರ್ ಡಿ ವಕೀಲರಿಂದಃ**

1. ನಿಪಿ.20 ರಲ್ಲಿ ಒಟ್ಟು 10 ಎಕರೆ 23 ಗುಂಟೆ ಇರುತ್ತದೆ. ಈ 10 ಎಕರೆ 23 ಗಂಟೆ ಕರಿಯಪ್ಪನ ಹೆಸರಿನಲ್ಲಿತ್ತು ಪೋಡ್ ಮಾಡಿ ಅಂತ ಅರ್ಜಿ ಕೊಟ್ಟಿರುತ್ತೇವೆ ಎಂದರೆ ಇಲ್ಲ. ನಿಪಿ.20 ಯಾವ ಉದ್ದೇಶದಿಂದ ಕೊಟ್ಟಿರುತ್ತೀರಾ ಎಂದರೆ ಆನೋಟೀಸು ನಾವೇ ಕೊಟ್ಟೆ ಇಲ್ಲ ಆದ್ದರಿಂದ ನೋಟೀಸು ಕೊಡುವ ಪ್ರಶ್ನೆಯೇ ಇಲ್ಲ. ಪೋಡ್ ಗೆ ಅರ್ಜಿ ಯಾರು ಕೊಟ್ಟಿದ್ದಾರೆ ಎಂದರೆ ಯಾರು ಕೂಡ ಕೊಟ್ಟಿಲ್ಲ ಮತ್ತು ನನ್ನ

ಮಾವನಾದ ದಾಸಪ್ಪ ಕೂಡ ಅರ್ಜಿ ಕೊಟ್ಟಿಲ್ಲ. ನಿಪಿ.21 ಮಹಜರ ಮಾಡಿ ವರದಿಕೊಟ್ಟಿದ್ದಾರೆ ಎಂದರೆ ಇಲ್ಲ. ನಿಪಿ.21 ರಲ್ಲಿ 1 ನೇ ಪ್ರತಿವಾದಿ ಸಹಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.13 ಮತ್ತು 23 ಯಾವ ದಾಖಲೆ ಎಂದರೆ ಮೋಸ ಮಾಡಿ ಮಾಡಿಕೊಂಡ ದಾಖಲೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ.13 ಮತ್ತು 23 ಒಂದೇ ದಾಖಲೆಯಾ ಎಂದರೆ ಬೇರೆ ಬೇರೆ ದಾಖಲೆ ಎಂದು ಹೇಳುತ್ತಾರೆ. ನಿಪಿ.12 ಮತ್ತು 22 ಒಂದೇ ದಾಖಲೆಯಾ ಎಂದರೆ ಬೇರೆ ಬೇರೆ ದಾಖಲೆ ಎಂದು ಹೇಳುತ್ತಾರೆ. ನಿಪಿ.11 ಮತ್ತು 26 ಒಂದೇ ದಾಖಲೆಯಾ ಎಂದರೆ ಹೌದು. ನಿಪಿ.22 ಯಾಕೆ ಕೊಟ್ಟಿದ್ದೀರಾ ಎಂದರೆ ಖಾತೆ ಮಾಡಬೇಡಿ ಅಂತ ಕೊಟ್ಟಿರುತ್ತೇವೆ. ನಿಪಿ.27 ಯಾಕೆ ಹಾಕಿದ್ದೀರಾ ಎಂದರೆ ಎಸಿ ಕೋರ್ಟಿ ನಲ್ಲಿ ಕೇಸು ವಿಲೇ ಪಡಿಸಿದ್ದಾರೆ ಆದ್ದರಿಂದ ನಿಪಿ.28 ರಲ್ಲಿ ಬರೆದಿರುವ ವಿಚಾರ ಸರಿಯಿದೆಯಾ ಎಂದರೆ ಹೌದು. 1 ನೇ ಪ್ರತಿವಾದಿ ಹೆಸರಿಗೆ ಖಾತೆ ಮಾಡಿ ಅಂತ ತಹಶೀಲ್ದಾರ್ ರವರು ಆದೇಶ ಮಾಡಿರುತ್ತಾರೆ ಎಂದರೆ ಸುಳ್ಳು. 29.11.2011 ರಂದು ತಹಶಿಲ್ದಾರ್ ರವರಿಗೆ ಖಾತೆ ಮಾಡಬೇಡಿ ಅಂತ ಅರ್ಜಿ ಕೊಟ್ಟಿರುತ್ತೇವೆ. ನಿಡಿ.4 ಖಾತೆ ಯಾವಾಗ ರಿಜಿಸ್ಟರ್ ಆಗಿದೆ ಎಂದರೆ ಅದು ಮೋಸದ ಪತ್ರ ಎಂದು ಹೇಳುತ್ತಾರೆ. ಅದೇರೀತಿ ಎಡಿ ಎಲ್ ಆರ್ ರವರು ಯಾವ ದಿನ ಆದೇಶ ಮಾಡಿದ್ದಾರೆ ಎಂದರೆ 28.06.2019 ರಂದು ಆದೇಶ ಮಾಡಿರುತ್ತಾರೆ ಆ ಆದೇಶ ತಪ್ಪು ಕಾರಣ ಯಾರಿಗೂ ಗೊತ್ತಿಲ್ಲದ ಹಾಗೆ ಆದೇಶ ಮಾಡಿರುತ್ತಾರೆ. ದಿಃ 28/06/2019 ರಂದು ಆದೇಶ ಆದ ನಂತರ ಪ್ರತಿವಾದಿಯರ ಹೆಸರಿಗೆ ಖಾತೆ ಆಗಿದೆ ಎಂದರೆ ದಾಸಪ್ಪನವರು ಮಾಡಿಕೊಟ್ಟಿಲ್ಲ ಎಂದು ಹೇಳುತ್ತಾರೆ. ಈ ಎಡಿ ಎಲ್ ಆರ್ ರವರ ಆದೇಶದ ಮೇಲೆ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಿವಿಲ್ ಈ ಕೇಸು ಹಾಕಿರುತ್ತೇವೆ ಎಂದು ಹೇಳುತ್ತಾರೆ. ಹಾಗಾದರೆ ಎಡಿ ಎಲ್ ಆರ್ ರವರ ಆದೇಶದ ಮೇಲೆ ಈ ಕೇಸು ಹಾಕಿದ್ದೀರಾ ಎಂದರೆ ಇಲ್ಲ ನಿಡಿ.4 ಪತ್ರದ ಆದಾರದ ಮೇಲೆ ಕೇಸು ಹಾಕಿರುತ್ತೇನೆ ಎಂದು ಹೇಳುತ್ತಾರೆ. ತಹಶೀಲ್ದಾರ್ ಮತ್ತು ಎಡಿ ಎಲ್ ಆರ್ ರವರ ಆದೇಶ ಸರಿಯಾಗಿದೆ ಆದರೂ ಕೂಡ ಆಸ್ತಿ ಲಪಟಾಯಿಸಬೇ ಎನ್ನುವ ಕಾರಣದಿಂದ ಈ ರೀತಿ ಸುಳ್ಳು ದಾವೆ ಹಾಕಿಕೊಂಡು ಬಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ

ಸರಿಯಲ್ಲ. ತಹಶೀಲ್ದಾರ್ ರವರು ಶರೀಕಾಗಿದ್ದಾರೆ ಅಂತ ಹೇಳುತಿದ್ದು ಅವರ ವಿರುದ್ದ ಏನಾದರೂ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಆರ್ ಎ 325/2019-20 ರಂತೆ ಎಸಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದೇವೆ ಎಂದು ಹೇಳುತ್ತಾರೆ. ಶಾರೀಕಾಗಿದ್ದಾರೆ ಅಂತ ತಹಶೀಲ್ದಾರವರ ಒಬ್ಬರ ಮೇಲೆ ಹಾಕಿದ್ದೀರಾ ಎಂದರೆ ತಹಶೀಲ್ದಾರ ಮತ್ತು ಗ್ರಾಮಸ್ಥರ ಮೇಲೆ ಹಾಕಿರುತ್ತೇನೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ. ಖಾತೆ ಮಾಡಬೇಡಿ ಅಂತ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಅಂತ ತಹಶೀಲ್ದಾರ್ ರವರು ಹೇಳಿರುತ್ತಾರೆ. ಹಾಗಾದರೆ ತಹಶೀಲ್ದಾರ್ ಕಚೇರಿಯಲ್ಲಿ ಖಾತೆ ಆಗಿದೆಯೋ ಇಲ್ಲವೊ ಎಂದರೆ ಗೊತ್ತಿಲ್ಲ. ತಹಶೀಲ್ದಾರ್ ರವರು ಮಾಡಿದ ಆದೇಶ ಸರಿಯಿದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಬೇಕು ಅಂತ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**